# ಕಾರು ನೋಂದಣಿ ವಿಳಂಬ; ಗ್ರಾಹಕನಿಗೆ ಪರಿಹಾರ ಕೊಡಿಸಿದ ಆಯೋಗ

ಪ್ರಜಾವಾಣಿ ವಾರ್ತೆ

ಹಾವೇರಿ: ಹೊಸ ಕಾರು ಖರೀದಿ ಮಾಡಿದ ಗ್ರಾಹಕರಿಂದ ಕಾರಿನ ನೋಂದಣಿ ಶುಲ್ಕ ಪಡೆದು, ಸಕಾಲಕ್ಕೆ ಕಾರು ನೋಂದಣಿ ಮಾಡಿಸದೇ ಪೊಲೀಸ್ ದಂಡಕ್ಕೆ ಕಾರಣವಾದ ಹಾವೇರಿ ರೇವಣಕರ ಮೋಟರ್ಸ್ ಸಂಸ್ಥೆಗೆ, ಬಡ್ಡಿ ಸಹಿತ ಹಣವನ್ನು ಗ್ರಾಹಕರಿಗೆ ನೀಡಬೇಕು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಸೂಚನೆ ನೀಡಿದೆ.

ಹಾವೇರಿ ನಗರದ ಬಸವೇಶ ಫಕ್ಕೀರಪ್ಪ ಹುಲ್ಲೂರ ಅವರು ನಗರದ ರೇವಣಕರ ಮೋಟರ್ಸ್ ಶೋರೂಂನಲ್ಲಿ 2022ರ ಮೇ 3ರಂದು ಕಾರು ನೋಂದಣಿ ಶುಲ್ಕ, ರಸ್ತೆ ತೆರಿಗೆ, ವಾಹನದ ಬಾಬ್ತು ಸೇರಿದಂತೆ ₹8.27 ಲಕ್ಷ ಪಾವತಿಸಿದ್ದರು.

2022 ಜೂನ್ 1ರ ಗಡುವಿನೊಳಗೆ ವಾಹನ ನೋಂದಣಿ ಮಾಡಿಸಬೇಕಾದ ಶೋರೂಂ ಮಾಲೀಕರು ಗಡುವು ಮೀರಿದರೂ ವಾಹನ ನೋಂದಣಿ ಮಾಡಿಸದ ಕಾರಣ ಹುಬ್ಬಳ್ಳಿಗೆ ಹೋಗುವ ಮಾರ್ಗದಲ್ಲಿ ಪೊಲೀಸರು ತಪಾಸಣೆ ನಡೆಸಿ ನೋಂದಣಿ ದಾಖಲೆ ಇಲ್ಲದ ಕಾರಣ ವಾಹನ ಮಾಲೀಕರಿಗೆ ದಂಡ ಹಾಕಿದ್ದರು.

ದಂಡ ಪಾವತಿ ಮಾಡಿ ನೋಂದಣಿಗೊಳ್ಳದ ವಾಹನದ ಬದಲು ಅವರು ಬಾಡಿಗೆ ವಾಹನದಲ್ಲಿ ತೆರಳಿದ್ದರು. ಈ ಸಂಬಂಧ ರೇವಣಕರ ಮೋಟರ್ಸ್ ವಿರುದ್ಧ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರು ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ಆಯೋಗದ ಅಧ್ಯಕ್ಷ ಈಶ್ವರಪ್ಪ ಬಿ.ಎಸ್ ಹಾಗೂ ಸದಸ್ಯೆ ಉಮಾದೇವಿ. ಎಸ್. ಹಿರೇಮಠ ನೇತೃತ್ವದ ತಂಡ, ಕಾರಿನ ನೋಂದಣಿ ಮಾಡಿಸಬೇಕು ಹಾಗೂ ಕಾರಿನ ನೋಂದಣಿಗೆ ಪಾವತಿಸಿದ ನೋಂದಣಿ ಶುಲ್ಕ ₹1,08,800ಕ್ಕೆ ವಾರ್ಷಿಕ 6ರಂತೆ ಬಡ್ಡಿ ಹಣವನ್ನು ಕಾರು ಖರೀದಿ ಮಾಡಿದ ದಿನಾಂಕದಿಂದ ಕಾರಿನ ನೋಂದಣಿಯಾಗುವವರೆಗೆ ಪಾವತಿಸಬೇಕು. ಹುಬ್ಬಳ್ಳಿ ಸಂಚಾರಿ ಪೊಲೀಸ್ ಠಾಣೆಗೆ ಪಾವತಿಸಿದ ದಂಡದ ಹಣ ₹500 ಹಾಗೂ ಪ್ರಯಾಣದ ವೆಚ್ಚಕ್ಕಾಗಿ ₹15 ಸಾವಿರ, ಮಾನಸಿಕ ಹಾಗೂ ದೈಹಿಕ ವ್ಯಥೆಗೆ ₹4 ಸಾವಿರ ಮತ್ತು ಪ್ರಕರಣದ ವೆಚ್ಚ ₹2 ಸಾವಿರಗಳನ್ನು 30 ದಿನದೊಳಗಾಗಿ ಪಾವತಿಸಲು ಆದೇಶಿಸಿದೆ.

ತಪ್ಪಿದಲ್ಲಿ ಪರಿಹಾರದ ಮೊತ್ತಕ್ಕೆ ವಾರ್ಷಿಕ ಶೇ 9 ರಂತೆ ಬಡ್ಡಿ ಸಮೇತ ಪಾವತಿಸಬೇಕು ಎಂದು ಹಾವೇರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಸೂಚನೆ ನೀಡಿದೆ.